**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ. ನಂ.946/2026**

ಫಿರ್ಯಾದಿ : ಬೀರೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು :

1. ಬಾಬುಲಾಲ್ ಸೈನಿ ಬಿನ್ ಪೂರ್ಣ ಸೈನಿ,
ವಯಸ್ಸು ಸುಮಾರು 20 ವರ್ಷ, ಟೈಲ್ಸ್ ಕೆಲಸ,
ವಾಸಃ ಕಲ್ಯಾಣ್ ಪುರ್, ಸಾಯಟ ಗ್ರಾಮ,
ಪಾಟಪರಿ ಪುರ, ಕರ್ಸೋಲಿ ಅಂಚೆ,
ಕರೋಲಿ ಜಿಲ್ಲೆ, ರಾಜಸ್ಥಾನ ರಾಜ್ಯ.
2. ನಿತೀಶ್ ಬಿನ್ ವಿಜಯ್ ಸೈನಿ,
ವಯಸ್ಸು ಸುಮಾರು 20 ವರ್ಷ, ಟೈಲ್ಸ್ ಕೆಲಸ,
ವಾಸಃ ಕಲ್ಯಾಣ್ ಪುರ, ಸಾಯಟ ಗ್ರಾಮ,
ಕರ್ಸೋಲಿ ಅಂಚೆ, ಕರೋಲಿ ಜಿಲ್ಲೆ, ರಾಜಸ್ಥಾನ ರಾಜ್ಯ.

**ದೋಷಾರೋಪಣೆ**

ಶ್ರೀ ತಾಹಾಕಲೀಲ್ ಕೆ.ಎ., ಬಿ.ಎ., ಎಲ್.ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕ 13.02.2026 ರಂದು ಬೆಳಗ್ಗೆ 06.00 ಗಂಟೆ ಸಮಯದಲ್ಲಿ ಕಡೂರು ಪಟ್ಟಣದ ರೈಲ್ವೇ ಸ್ಟೇಷನ್ ಹತ್ತಿರ ಚಾಸಾ.7 ರವರು ತನ್ನ ಬಾಬ್ತು ಇದ್ದ ಕೆಎ 35 ಎಸ್ 2691 ಎಂಬ ನೊಂದಣಿ ಸಂಖ್ಯೆ ಇರುವ ಬೈಕನ್ನು ನಿಲ್ಲಿಸಿದ್ದು, ಸದರಿ ಬೈಕನ್ನು ಆರೋಪಿತರಾದ ನೀವು ಕಳ್ಳತನ ಮಾಡಿಕೊಂಡು, ಅದೇ ದಿನ ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಬೀರೂರು ಪೋಲಿಸ್ ಠಾಣಾ ಸರಹದ್ದಿನ ಬೀರೂರು ಅಜ್ಜಂಪುರ ರಸ್ತೆಯ ಪಕ್ಕದಲ್ಲಿರುವ ದೋಗೇಹಳ್ಳಿ ಗ್ರಾಮದ ಹತ್ತಿರ ಕಳ್ಳತನ ಮಾಡುವ ಉದ್ದೇಶದಿಂದ ಹೋಗಿದ್ದು, ಆ ಸಮಯದಲ್ಲಿ ರಸ್ತೆಯ ಪಕ್ಕದಲ್ಲಿ ಚಾಸಾ.1 ರವರು ತನ್ನ ಬಾಬ್ತು ಇದ್ದ ಚಿಲ್ಲರೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ, ಆರೋಪಿತರಾದ ನೀವು ಅಂಗಡಿಯ

ಹತ್ತಿರ ಹೋಗಿ, ಬೈಕನ್ನು ನಿಲ್ಲಿಸಿ, ನಂತರ ನಿಮ್ಮ ಪೈಕಿ 1 ನೇ ಆರೋಪಿತರಾದ ನೀವು ಚಾಸಾ.1 ರವರ ಹತ್ತಿರ ಸಿಗರೇಟ್ ಖರೀದಿ ಮಾಡಿಕೊಂಡು ಸೇದಿ, ನಂತರ ಚಾಸಾ.1 ರವರಿಗೆ ಪೆನ್ ಕೊಡುವಂತೆ ಕೇಳಿದ್ದು, ಆಗ ಚಾಸಾ.1 ರವರು ಪೆನ್ ಕೊಡಲು ಹಿಂದೆ ತಿರುಗಿದಾಗ, 1 ನೇ ಆರೋಪಿತರಾದ ನೀವು ಚಾಸಾ.1 ರವರ ಕುತ್ತಿಗೆಗೆ ಕೈ ಹಾಕಿ ಬಂಗಾರದ ಸರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದಾಗ, ಚಾಸಾ.1 ರವರು ಸರವನ್ನು ಗಟ್ಟಿಯಾಗಿ ಹಿಡಿದುಕೊಂಡಿರುತ್ತಾರೆ. ಆಗ 1 ನೇ ಆರೋಪಿತರಾದ ನೀವು ಸರವನ್ನು ಜೋರಾಗಿ ಎಳೆದ ಪರಿಣಾಮ ಸರವು ತುಂಡಾಗಿದ್ದು, ಸುಮಾರು 19.480 ಗ್ರಾಂ ತೂಕದ ಸರವನ್ನು ಕಿತ್ತುಕೊಂಡು ಬೈಕಿನಲ್ಲಿ ಹೋಗುತ್ತಿದ್ದಾಗ, ಚಾಸಾ.1 ರವರು ಕೂಗಾಡಿದ್ದು, ಚಾಸಾ.2 ಮತ್ತು ಚಾಸಾ.3 ರವರು ಹೋಗಿ ಬೈಕನ್ನು ಅಡ್ಡಗಟ್ಟಿ ದಾಗ ಬೈಕಿನ ಹಿಂಬದಿ ಕುಳಿತಿದ್ದ 1 ನೇ ಆರೋಪಿತರಾದ ನೀವು ಜಿಗಿದು ಓಡಿ ಹೋಗಿರುತ್ತೀರಿ ಹಾಗೂ 2 ನೇ ಆರೋಪಿತರಾದ ನಿಮ್ಮನ್ನು ಹಿಡಿದುಕೊಂಡಿರುತ್ತಾರೆ. ಚಾಸಾ.1 ರವರ ಕುತ್ತಿಗೆಯಿಂದ ಸರ ಕಿತ್ತಿದ್ದರಿಂದ ಚಾಸಾ.1 ರವರಿಗೆ ಬಲದೇ ಕುತ್ತಿಗೆಯಿಂದ ಎದೆಯವರೆಗೆ ಸಾಮಾನ್ಯ ಸ್ವರೂಪದ ತರಚಿದ ಗಾಯವಾಗಿರುತ್ತದೆ. ಆ ಕಾರಣ, ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 309(6) ಹಾಗೂ 303(2)ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

1 ನೇ ಆರೋಪಿಯ ಉತ್ತರಃ ಹೌದು

2 ನೇ ಆರೋಪಿಯ ಉತ್ತರಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

1 ನೇ ಆರೋಪಿಯ ಉತ್ತರಃ ವಿಚಾರಣೆಯಾಗಬೇಕು

2 ನೇ ಆರೋಪಿಯ ಉತ್ತರಃ ವಿಚಾರಣೆಯಾಗಬೇಕು

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ.

ದಿನಾಂಕಃ 09.06.2026.

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಕಡೂರು.